


# ನವೋದಯ ಶಿಕ್ಷಣ ಮತ್ತು ಪರಿಸರ ಅಭಿವೃದ್ಧಿ ಸೇವಾ ಸಂಸ್ಥೆ (ನೀಡ್ಸ್)

# ವಾರ್ಷಿಕ ವರದಿ 2022–23









ಅರಿವು ಜಾಗೃತಿ ಸಂಘಟನೆ


**ನವೋದಯ ಶಿಕ್ಷಣ ಮತ್ತು ಪರಿಸರ ಅಭಿವೃದ್ಧಿ ಸೇವಾ ಸಂಸ್ಥೆ (ನೀಡ್ಸ್)**

ಐ.ಎಂ.ಎ. ಕಟ್ಟದ, ರಂಗನಾಥ ನಗರ,

ರಾಣೇಬೆನ್ನೂರು – 581 115, ಹಾವೇರಿ ಜಿಲ್ಲೆ.

ದೂ. 08373 – 260111, ಮೊ: 9972363984

**Email Id :** needsorg.rnr92@gmail.com

**Web Site : needs.1ngo.in**

## Table of Contents


1. 2022–23 ನೇ ಸಾಲಿನ ರಾಜ್ಯಾ ನಕ್ಷೆಯಲ್ಲಿ ಸಂಸ್ಥೆಯ ಯೋಜನೆಗಳು ಮತ್ತು ಮಾನವ ಸಂಪನ್ಮೂಲ. ........................... 2

2. 2022–23ನೇ ಸಾಲಿನ ವಾರ್ಷಿಕ ಪಕ್ಷಿನೋಟ ........................................................................ 3

3. 2022–23ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಯೋಜನೆಗಳು :.................................................... 4

3.1. ಇತರೆ ಸಮೀಕ್ಷೆ & ಅಂದೋಲನಾ ಕಾರ್ಯಕ್ರಮಗಳು :.............................................................. 4

4. ಕ್ಷೇತ್ರ ಸಂಘಟನೆ : ............................................................................................... 5

5. 2022–23 ನೇ ಸಾಲಿನ ವರೆಗೆ ಸಂಸ್ಥೆಯಿಂದ ರಚನೆಗೊಂಡ ಸ್ವ–ಸಹಾಯ ಸಂಘಗಳ ವಿವರ : .................................. 6

6. ಆದಾಯ ಮತ್ತು ಖರ್ಚಿನ ವಿವರಗಳು :.............................................................................. 7

7. 2022–23ನೇ ಸಾಲಿನ ಆಡಳಿತ ಮಂಡಳಿಯ ವಿವರ.................................................................... 8

8. 2022–23ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳ ಸಂಕ್ಷಿಪ್ತ ವಿವರ : ........................................... 9

8.1. ಕೆಯುಐಡಿಎಫ್‌ಸಿ ಅರಿವು, ಜಾಗೃತಿ ಮತ್ತು ಸಂವಹನ ಹಾಗೂ ಫಲಿತಾಂಶ ಆಧಾರಿತ ನೆರವು ಶೌಚಾಲಯ ಕಾರ್ಯಕ್ರಮ ಹಂತ–2, ಹರಿಹರ, ಬ್ಯಾಡಗಿ ಮತ್ತು ರಾಣೇಬೆನ್ನೂರು ನಗರಗಳು. ............................................................ 9

8.2. ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು.............................................. 10

8.3. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು – ಹಾವೇರಿ ಜಿಲ್ಲಾ ಜೈವಿಕ ಇಂಧನ ಅಭವೃದ್ಧಿ ಕಾರ್ಯಕ್ರಮ–ಹಾವೇರಿ. ............................................................................................ 11

8.4. ಸುಜಲಾನ್ ಫೌಂಡೇಶನ್ – ಹಾವೇರಿ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಗದಗ, ಬೆಳಗಾವಿ, ಕೊಪ್ಪಳ ಮತ್ತು ರಾಯಚೂರು :................................................................................................ 12

8.5. ವೆಸ್ಟಾಸ್ ವಿಂಡ್ ಟೆಕ್ನಾಲಾಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ – ಯಲಬುರ್ಗಾ : .................................... 12

8.6. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ (WDDP) ರಾಣೇಬೆನ್ನೂರು & ಹಾವೇರಿ . 13

8.7. ನವೋದಯ ಗ್ರಾಮ ವಿಕಾಸ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಚಂದಾಪುರ, ಶಿಗ್ಗಾಂವ್ : ............ 15

8.8. ನವವಿಕಾಸ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಶಲವಡಿ, ನವಲಗುಂದ :........................................... 17

9. ಪತ್ರಿಕಾ ವರದಿ :.................................................................................................... 18

10. ಸನ್ 2023–24ರ ಮುಂಗಡ ಪತ್ರ (ಬಜೆಟ್) ........................................................................ 19

## 1. 2022–23 ನೇ ಸಾಲಿನ ರಾಜ್ಯಾ ನಕ್ಷೆಯಲ್ಲಿ ಸಂಸ್ಥೆಯ ಯೋಜನೆಗಳು ಮತ್ತು ಮಾನವ ಸಂಪನ್ಮೂಲ.

### ನೀಡ್ಸ್ ಸಂಸ್ಥೆ ಕಾರ್ಯಕ್ಷೇತ್ರಗಳು

| | |
|---|---|
| ಹಾವೇರಿ | ಬಳ್ಳಾರಿ |
| ಧಾರವಾಡ | ಬೆಳಗಾವಿ |
| ಗದಗ | ಕೊಪ್ಪಳ |
| ರಾಯಚೂರು | ಉತ್ತರ ಕನ್ನಡ |
| ದಾವಣಗೆರೆ | ಬಾಗಲಕೋಟೆ |
| ಚಿತ್ರದುರ್ಗ | ವಿಜಯನಗರ |












## 2. 2022–23ನೇ ಸಾಲಿನ ವಾರ್ಷಿಕ ಪಕ್ಷಿನೋಟ

ಸಮಾಜ ಸೇವೆ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ನೀಡ್ಸ್ ಸಂಸ್ಥೆಯು 2022–23 ನೇ ಸಾಲಿನಲ್ಲೂ ಉತ್ತಮ ಪ್ರಗತಿಯತ್ತ ಸಾಧನೆ ಹಾದಿಯಲ್ಲಿ ಮುಂದುವರದಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಸನ್ 1992 ರಲ್ಲಿ ಪ್ರಾರಂಭವಾದ ಸಂಸ್ಥೆ ಇಲ್ಲಿಯವರೆಗೂ ಹತ್ತು ಹಲವಾರು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ತುಂಬಾ ಯಶಸ್ವಿಯಾಗಿ ಅನುಷ್ಠಾನ ಮಾಡುತ್ತಾ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಈಗ 30 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುತ್ತದೆ. 2022–23 ನೇ ಸಾಲಿನಲ್ಲಿ ಸಂಸ್ಥೆಯು ಹೆಚ್ಚಿನ ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತದೆ. ಕಂಪ್ಯೂಟರ್, ಪ್ರಿಂಟರ್, ಪ್ರೋಜೆಕ್ಟರ್, ಡಿಜಿಟಲ್ ಕ್ಯಾಮರಾ, ಹ್ಯಾಂಡಿ–ಕ್ಯಾಮ್, ಕಾರು, ಬೈಕ್ ಇನ್ನಿತರ ತಾಂತ್ರಿಕ ಸೌಲಭ್ಯಗಳ ಜೊತೆಗೆ ಸ್ವಯಂ ಸೇವಕರನ್ನೊಳಗೊಂಡ ಒಟ್ಟೂ 10 ಸಿಬ್ಬಂದಿಗಳು ವಿವಿಧ ಯೋಜನೆಗಳಲ್ಲಿ ಹಾಗೂ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ವಿವಿಧ ವಿಷಯಗಳಲ್ಲಿ ತಾಂತ್ರಿಕ ಸಲಹೆಗಾರರನ್ನು ಕೂಡ ಹೊಂದಿರುತ್ತದೆ.

ಒಟ್ಟೂ 9 ಜಿಲ್ಲೆಗಳ (ಹಾವೇರಿ, ಧಾರವಾಡ, ಕೊಪ್ಪಳ, ಗದಗ, ಬೆಳಗಾವಿ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಹಾಗೂ ವಿಜಯನಗರ) ಆಯ್ದ ತಾಲೂಕುಗಳಲ್ಲಿ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಯೋಜನಾ ಕಛೇರಿಗಳನ್ನು ಹೊಂದಿರುತ್ತದೆ. ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಾ ವಿವಿಧ ಇಲಾಖೆ, ಸಂಘ–ಸಂಸ್ಥೆಗಳೊಂದಿಗೆ ಉತ್ತಮವಾದ ಸಂಪರ್ಕವನ್ನು ಹೊಂದಿ ತನ್ನದೆ ಆದ ಛಾಪನ್ನು ಮೂಡಿಸಿರುತ್ತದೆ. ಆಡಳಿತ ಮಂಡಳಿಯವರ ಸಾಮಾಜಿಕ ಕಳಕಳಿ & ಜವಾಬ್ದಾರಿಯಿಂದ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳ ಕಾರ್ಯಕ್ರಮಗಳನ್ನು ನಿರಂತರ ಸ್ವಮೌಲ್ಯಮಾಪನ, ಮೇಲ್ವಿಚಾರಣೆ & ಅನುಸರಣೆ ಮಾಡುತ್ತಿರುವ ಫಲವಾಗಿ ಉತ್ತಮವಾದ ಯಶಸ್ಸನ್ನು ಹೊಂದಲು ಸಾಧ್ಯವಾಯಿತು.

ಜಲಾನಯನ ಅಭಿವೃದ್ಧಿ ಯೋಜನೆಗಳಲ್ಲಿ ಸಂಸ್ಥೆಯು ಸಾಧಿಸಿದ ಪರಿಣಾಮಕಾರಿಯಾದ ಪ್ರಗತಿಯನ್ನು ಪರಿಗಣಿಸಿ ಕೃಷಿ ಇಲಾಖೆಯವರೇ ಸ್ವ–ಪ್ರೇರಣೆಯಿಂದ ಮುಂದೆ ಬಂದು ಇತರೆ ಹಲವಾರು ಜಲಾನಯನ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಸಾವಯವ ಗ್ರಾಮ ಯೋಜನೆಯಲ್ಲಿ ಉತ್ತಮ ಪ್ರಗತಿ ಪರಿಗಣಿಸಿ ಕೃಷಿ ಇಲಾಖೆ ರಾಣೇಬೆನ್ನೂರ ತಾಲೂಕಿನ ಎಣ್ಣಿಹೊಸಳ್ಳಿ ಮತ್ತು ನಿಟ್ಟೂರ ಗ್ರಾಮಗಳಲ್ಲಿ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುತ್ತದೆ.

ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಬೌದ್ಧಿಕ ಬೆಳವಣಿಗೆ ಹಾಗೂ ಸಾಮರ್ಥ್ಯ ಅಭಿವೃದ್ಧಿಗಾಗಿ ತರಬೇತಿ ಮತ್ತು ಕ್ಷೇತ್ರ ಪ್ರವಾಸಗಳನ್ನು ಮಾಡಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ವಿವಿಧ ವಿಶ್ವವಿದ್ಯಾಲಯಗಳ ಬಿ.ಎಸ್.ಡಬ್ಲು ಮತ್ತು ಎಂ.ಎಸ್.ಡಬ್ಲು. ವಿದ್ಯಾರ್ಥಿಗಳ ಪ್ರಾಯೋಗಿಕ ಕ್ಷೇತ್ರ ಅಧ್ಯಯನಕ್ಕಾಗಿ ನಮ್ಮ ಸಂಸ್ಥೆಯನ್ನು ಗುರುತಿಸಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ಅಧ್ಯಯನ ಮಾಡಿರುತ್ತಾರೆ. 2022–23ನೇ ಸಾಲಿನಲ್ಲಿ ಈ ಕೆಳಗೆ ಕಾಣಿಸಿರುವ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುತ್ತದೆ.

## 3. 2022–23ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಯೋಜನೆಗಳು :

1) ಕೆಯುಐಡಿಎಫ್ಸಿ ಅರಿವು, ಜಾಗೃತಿ ಮತ್ತು ಸಂವಹನ ಹಾಗೂ ಫಲಿತಾಂಶ ಆಧಾರಿತ ನೆರವು ಶೌಚಾಲಯ ಕಾರ್ಯಕ್ರಮ ಹಂತ–2, ಹರಿಹರ, ಬ್ಯಾಡಗಿ ಮತ್ತು ರಾಣೇಬೆನ್ನೂರು ನಗರಗಳು.
2) ಜಿಲ್ಲಾ ಸರ್ಕಾರೇತರ ಸಂಸ್ಥೆ, ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮ –ಹಾವೇರಿ.
3) ಸುಜಲಾನ್ ಫೌಂಡೇಶನ್ ಕರ್ ಯೋಗಿ ಯೋಜನೆ–ಹಾವೇರಿ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಗದಗ, ಬೆಳಗಾವಿ, ಕೊಪ್ಪಳ ಮತ್ತು ರಾಯಚೂರು.
4) ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್–ಯಲಬುರ್ಗಾ.
5) ನವೋದಯ ಗ್ರಾಮ ವಿಕಾಸ ವಿವಿದೋದ್ದೇಶ ಸೌಹಾರ್ಧ ಸಹಕಾರಿ ನಿಯಮಿತ, ಚಂದಾಪುರ, ಶಿಗ್ಗಾಂವ್ ತಾ.
6) ನವವಿಕಾಸ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ ಶಲವಡಿ. ನವಲಗುಂದ ತಾಲ್ಲೂಕ
7) ಮಹಾತ್ಮಾ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.
8) ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ (WDPD) ಕಾರ್ಯಕ್ರಮ ಹಾವೇರಿ, ರಾಣೇಬೆನ್ನೂರು.
9) ಬಿ.ಎಂ.ಎಂ ಇಸ್ಪಾಟ್ ಪ್ರೈ. ಲಿ. ಡಾಣಾಪುರ, ಹೊಸಪೇಟೆ ತಾಲ್ಲೂಕ, ವಿಜಯನಗರ ಜಿಲ್ಲೆ.

### 3.1. ಇತರೆ ಸಮೀಕ್ಷೆ & ಅಂದೋಲನಾ ಕಾರ್ಯಕ್ರಮಗಳು :

ವಿಶ್ವ ಪರಿಸರ ದಿನಾಚರಣೆ, ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಹಾಗೂ ಬ್ರಷ್ಟಾಚಾರ ನಿರ್ಮೂಲನಾ ದಿನಾಚರಣೆ, ವಿಶ್ವ ಮಹಿಳಾ ದಿನಾಚರಣೆ & ವನಮಹೋತ್ಸವ, ಹಾಗೂ ರಕ್ತದಾನ ಶಿಬಿರವನ್ನು ಏರ್ಪಡಿಸುವುದರೊಂದಿಗೆ ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಪ್ರತಿ ವರ್ಷ ಆಚರಣೆ ಮಾಡುವುದರೊಂದಿಗೆ ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಅಂದೋಲನ ಮೂಡಿಸಲಾಗುತ್ತದೆ.

ಸಂಸ್ಥೆಯು ಸಮಾನ ಮನಸ್ಕ ಹಾಗೂ ಸಮಾಜದ ಬಗ್ಗೆ ಕಳಕಳಿ ಹೊಂದಿದ ಉತ್ತಮ ಆಡಳಿತ ಮಂಡಳಿಯನ್ನು ಹೊಂದಿದ್ದು, ಸಂಸ್ಥೆಯ ಸಿಬ್ಬಂದಿಗಳೇ ತಮ್ಮ ಆಸ್ತಿಯೆಂಬ ಧ್ಯೇಯವನ್ನು ಇಟ್ಟುಕೊಂಡು ಅವರ ಕಾರ್ಯದಕ್ಷತೆ ಹೆಚ್ಚಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಈ ಎಲ್ಲಾ ಪ್ರಗತಿಗೆ ಉತ್ಸಾಹಿ ಕಾರ್ಯಕರ್ತರ ತಂಡ, ಸೂಕ್ತ ನಿರ್ಧಾರಗಳನ್ನು ಕೈಗೊಂಡು ಅವುಗಳ ಅನುಷ್ಠಾನ ಮತ್ತು ಅನುಸರಣೆ ಮಾಡುವಲ್ಲಿ ಆಡಳಿತ ಮಂಡಳಿ ನಿರ್ದೇಶಕರ, ದಾನಿ ಸಂಸ್ಥೆಗಳ, ಸರಕಾರದ ಎಲ್ಲಾ ಹಿರಿಯ ಮತ್ತು ಕಿರಿಯ ಅಧಿಕಾರಿಗಳ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬ್ಯಾಂಕುಗಳ ಸಹಕಾರ ಸಂಯೋಜನೆಗಳಿಂದ ಸಾಧ್ಯವಾಗಿರುತ್ತದೆ. ಸಂಸ್ಥೆಯ ಧ್ಯೆಯೋದ್ದೇಶ ಹಾಗೂ ಗುರಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸಂಸ್ಥೆಯ ಸಿಬ್ಬಂದಿಗಳ ಪಾತ್ರವು ಪ್ರಮುಖವಾಗಿರುತ್ತದೆ. ರಾಜ್ಯ/ಜಿಲ್ಲೆ ಒಕ್ಕೂಟಗಳಲ್ಲಿ ನಮ್ಮ ಸಂಸ್ಥೆಯು ಹೆಚ್ಚಿನ ಮಹತ್ವ ಪಡೆದಿದೆ.

## 4. ಕ್ಷೇತ್ರ ಸಂಘಟನೆ :

2022–23 ನೇ ಸಾಲಿನ ಅಂತ್ಯದವರೆಗೆ ವಿವಿಧ ಯೋಜನೆಗಳಡಿಯಲ್ಲಿ ನೀಡ್ಸ್ ಸಂಸ್ಥೆಯಿಂದ ರಚಿಸಲ್ಪಟ್ಟ ವಿವಿಧ ಸಂಘಟನೆಗಳ ಮಾಹಿತಿ.

| ಯೋಜನೆಯ ಹೆಸರು | ದಾನಿ ಸಂಸ್ಥೆಯ ಹೆಸರು | ಸ್ವ ಸಹಾಯ ಸಂಘಗಳು | ಒಕ್ಕೂಟ /ವ್ಹಿ,ಡಿ,ಸಿ | ಕ್ಷೇತ್ರ ಗುಂಪು/ ಬಳಕೆದಾರ ಗುಂಪು | ಕಾರ್ಯಕಾರಿ ಸಮಿತಿ/ ಗ್ರಾಮಾಭಿವೃದ್ಧಿ ಸಮಿತಿ/ ಜಂಟಿ ಭಾದ್ಯತಾ ಗುಂಪು | ಗ್ರಾಮ ಅರಣ್ಯ ಸಮಿತಿ | ತಾಲೂಕ ಒಕ್ಕೂಟ |
|---|---|---|---|---|---|---|---|
| ಗುಡುಗೂರು ಜಲಾನಯನ | ನಬಾರ್ಡ | 27 | 01 | 7 | 01 | 1 | 0 |
| ನಬಾರ್ಡ ಸ್ವ ಸಹಾಯ ಸಂಘಗಳು, ರಾಣೆಬೆನ್ನೂರು | ನಬಾರ್ಡ | 50 | 0 | 0 | 00 | 0 | 0 |
| ಸಾವಯವಗ್ರಾಮ ಯೋಜನೆ– ಕೂನಬೇವು/ಚಿಕ್ಕನಲ್ಲೂರ, ಸಾವಯವ ಭಾಗ್ಯಯೋಜನೆ ಎಣ್ಣಿಹೊಸಳ್ಳಿ/ನಿಟ್ಟೂರ | ಕೃಷಿ ಇಲಾಖೆ | 21 | 0 | 0 | 05 | 0 | 0 |
| ದೇಶಪಾಂಡೆ ಪೌಂಡೇಶನ್–ಚಂದಾಪುರ | ದೇಶಪಾಂಡೆ | 89 | 0 | 0 | 00 | 1 | 1 |
| ಕರಯೋಗಿ ಯೋಜನೆ | ಸುಜಲಾನ್ ಪೌಂಡೇಶನ್ | 218 | 29 | 0 | 00 | 0 | 0 |
| ರಾ.ಜ.ಅ.ಯೋ ಶಿಡಗನಾಳ,ಉಪ ಜಲಾನಯನ ರಾಣೇಬೆನ್ನೂರ, ಹಾವೇರಿ ಜಿಲ್ಲೆ. | ಶಿಡಗನಾಳ | 29 | 03 | 32 | 04 | 0 | 0 |
| ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಕೊಂಕಣಕುರಹಟ್ಟಿ ಉ.ಜ. ಧಾರವಾಡ ತಾಲೂಕ | ಕ.ಜ.ಅ.ಇ | 25 | 0 | 31 | 15 | 0 | 0 |
| ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಬರದ್ವಾಡ ಉ.ಜ. ಧಾರವಾಡ ತಾಲೂಕ | ಕ.ಜ.ಅ.ಇ | 24 | 0 | 18 | 12 | 0 | 0 |
| ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಹಂತ 3 ಮತ್ತು 4 ಧಾರವಾಡ ಜಿಲ್ಲೆ | ಕ.ಜ.ಅ.ಇ | 140 | 6 | 150 | 24 | 0 | 1 |
| ಪ್ರಾಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಹಂತ 5 ಮತ್ತು 6 ಧಾರವಾಡ ಜಿಲ್ಲೆ | ಕ.ಜ.ಅ.ಇ | 79 | 0 | 85 | 8 | 0 | 0 |
| ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ (WDPD) ಕಾರ್ಯಕ್ರಮ ಹಾವೇರಿ, ರಾಣೇಬೆನ್ನೂರು. | ಕೃಷಿ ಇಲಾಖೆ | 91 | 0 | 80 | 7 | 0 | 0 |
| **ಒಟ್ಟು** | | **793** | **39** | **403** | **76** | **2** | **2** |

## 5. 2022–23 ನೇ ಸಾಲಿನ ವರೆಗೆ ಸಂಸ್ಥೆಯಿಂದ ರಚನೆಗೊಂಡ ಸ್ವ–ಸಹಾಯ ಸಂಘಗಳ ವಿವರ :

| ಯೋಜನೆಯ ಹೆಸರು | ಸ್ವಸಹಾಯ ಸಂಘಗಳು | ಒಟ್ಟು ಸದಸ್ಯರು | ಒಟ್ಟು ಉಳಿತಾಯ (ರೂ.ಲಕ್ಷಗಳಲ್ಲಿ) | ಸುತ್ತು ನಿಧಿ (ರೂ.ಲಕ್ಷಗಳಲ್ಲಿ) | ಬ್ಯಾಂಕಿನಿಂದ ದೊರೆತ ಸಾಲ (ರೂ.ಲಕ್ಷಗಳಲ್ಲಿ) | ಪಡೆದ ಶ್ರೇಣಿ | | |
|---|---|---|---|---|---|---|---|---|
| | | | | | | ಉತ್ತಮ | ಸಾಧಾರಣ | ಕನಿಷ್ಠ |
| ನಬಾರ್ಡ ಗುಡುಗೂರು | 27 | 336 | 1.90 | 9.36 | 8.00 | 10 | 9 | 8 |
| ದೇಶಪಾಂಡೆ ಪೌಂಢೇಶನ್ ಚಂದಾಪುರ | 89 | 1,210 | 3.01 | 0.00 | 12.23 | 60 | 21 | 8 |
| ನಬಾರ್ಡ (ಹೊನ್ನತ್ತಿ) ಸ್ವ ಸ ಸಂಘ, ರಾಣೆಬೆನ್ನೂರು. | 50 | 730 | 3.50 | 3.50 | 9.96 | 29 | 14 | 7 |
| ಸಾವಯವ ಕೂನಬೇವು / ಚಿಕ್ಕನೆಲ್ಲೂರು/ಎಣ್ಣಿಹೊಸಳ್ಳಿ/ನಿಟ್ಟೂರು | 21 | 182 | 2.50 | 0.00 | 00.0 | 10 | 8 | 3 |
| ಕರಯೋಗಿ ಯೋಜನೆ | 218 | 2,280 | 12.50 | 2.00 | 1.25 | 140 | 66 | 12 |
| ರಾ.ಜ.ಅ.ಯೋ ಶಿಡಗನಾಳ, | 29 | 310 | 3.55 | 5.00 | 13.40 | 22 | 7 | 0 |
| ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಕೊಂಕಣಕುರಹಟ್ಟಿ ಉ.ಜ. ಕುಂದಗೊಳ ತಾಲೂಕ ಧಾರವಾಡ ಜಿಲ್ಲೆ | 25 | 359 | 14.29 | 15.25 | 15.12 | 16 | 7 | 2 |
| ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಬರದ್ವಾಡ ಉ.ಜ. ಕುಂದಗೊಳ ತಾಲೂಕ ಧಾರವಾಡ ಜಿಲ್ಲೆ | 24 | 341 | 14.24 | 12.50 | 14.15 | 20 | 3 | 1 |
| ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಹಂತ 3 ಮತ್ತು 4 ಧಾರವಾಡ ಜಿಲ್ಲೆ | 140 | 2,116 | 27.30 | 35.00 | 28.40 | 87 | 30 | 23 |
| ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 5 ಮತ್ತು 6ನೇ ಹಂತ ಧಾರವಾಡ ಜಿಲ್ಲೆ | 79 | 2022 | 36.27 | 0 | 213.20 | 56 | 12 | 11 |
| ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ (WDPD) ಕಾರ್ಯಕ್ರಮ ಹಾವೇರಿ, ರಾಣೇಬೆನ್ನೂರು. | 91 | 1,365 | 40.95 | 0 | 0 | 51 | 30 | 10 |
| **ಒಟ್ಟು** | **793** | **11,251** | **160.01** | **82.61** | **315.71** | **501** | **207** | **85** |

## 6. ಆದಾಯ ಮತ್ತು ಖರ್ಚಿನ ವಿವರಗಳು :

2022–23 ನೇ ಸಾಲಿನಲ್ಲಿ ಸಂಸ್ಥೆಯು ಒಟ್ಟು ರೂ. **155.00/–** ಲಕ್ಷ ಅನುದಾನ ಬೇರೆ ಬೇರೆ ಮೂಲಗಳಿಂದ ಸ್ವೀಕರಿಸಲಾಗಿರುತ್ತದೆ. ಹಾಗೆ ಯೋಜನೆಗಳ ಅನುಷ್ಠಾನಕ್ಕಾಗಿ ಒಟ್ಟು ರೂ.**145.00/–** ಲಕ್ಷಗಳಲ್ಲಿ ಖರ್ಚುಮಾಡಲ್ಪಟ್ಟಿರುತ್ತದೆ.

ಈ ಸಾಲಿನಲ್ಲಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ, ಮಳೆನೀರಿನ ಸಂರಕ್ಷಣೆಗಳು, ಅಂತರ ಜಲ ಮಟ್ಟವನ್ನು ಹೆಚ್ಚಿಸುವಿಕೆ, ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವಲ್ಲಿ ವಿಶೇಷವಾದ ಪ್ರಯತ್ನಗಳನ್ನು ನಡೆಸಿರುವುದು ಇರುತ್ತದೆ. ಜೊತೆಗೆ ಸಮುದಾಯದ ಬಲವರ್ಧನೆ ಹಾಗೂ ಆರ್ಥಿಕ ಉನ್ನತಿಗಾಗಿ ಶ್ರಮಿಸಲಾಗಿದೆ, ಪರಿಣಾಮವಾಗಿ ಒಕ್ಕೂಟ ಮತ್ತು ಜನ ಸಂಘಟನೆಗಳ ಸಾಮರ್ಥ್ಯ ಹೆಚ್ಚಳ, ನೈಸರ್ಗಿಕ ಸಂಪನ್ಮೂಲಗಳ ಪುನರ ಉತ್ಪತ್ತಿ, ಮಹಿಳೆಯರು ಮತ್ತು ಕಡು ಬಡಜನರ ಆದಾಯ ಹೆಚ್ಚಳ, ಮಕ್ಕಳ ಶಿಕ್ಷಣ ಸುಧಾರಣೆ, ನಿರುದ್ಯೋಗ ನಿರ್ಮೂಲನೆ, ವಲಸೆ ನಿಯಂತ್ರಣ, ಸಾವಯವ ಕೃಷಿಯತ್ತ ಒಲವು, ಕೃಷಿ ಉತ್ಪಾದನೆಯಲ್ಲಿ ಇಳುವರಿ ಹೆಚ್ಚಳಕ್ಕೆ ಕಾರಣವಾಗಿರುತ್ತದೆ.


ಸನ್ 2022–23 ನೇ ಅವಧಿಯಲ್ಲಿ ನೀಡ್ಸ್ ಸಂಸ್ಥೆಗೆ ನೆರವು, ಸಹಾಯ ಹಾಗೂ ಸಹಕಾರವನ್ನು ನೀಡಿದ ಹಿಂದಿನ ಎಲ್ಲಾ ಆಡಳಿತ ಮಂಡಳಿಯ ಸದಸ್ಯರುಗಳು, ಜಿಲ್ಲಾ ಪಂಚಾಯತ್ ಹಾವೇರಿ, ಜಲಾನಯನ ಅಭಿವೃಧಿ ಮೂಲಕ ಬರಗಾಲ ತಡೆಯುವಿಕೆ (WDDP) ಕಾರ್ಯಕ್ರಮ ಕೃಷಿ ಇಲಾಖೆ ಹಾವೇರಿ & ಧಾರವಾಡ, ಜೈವಿಕ ಇಂಧನ ಅಭಿವೃದ್ಧಿ ಯೋಜನೆ, ಹಾವೇರಿ, ಸುಜಲಾನ್ ಫೌಂಡೇಶನ್ ಪುಣೆ, ವಿಸ್ವಾಸ್ ವಿಂಡ್ ಟೆಕ್ನಾಲಾಜಿ ಇಂಡಿಯಾ ಪ್ರೈ.ಲಿ. ಕೊಪ್ಪಳ, ನಗರಸಭೆ ಕಾರ್ಯಾಲಯ ರಾಣೇಬೆನ್ನೂರು, ಹರಿಹರ, ಪುರಸಭೆ ಬ್ಯಾಡಗಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ನಿಯಮಿತ (KUIDFC), ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು, ಮಹಾತ್ಮಾ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಪಂಚಾಯತ್ ರಾಜ್ ಇಲಾಖೆ ಬೆಂಗಳೂರು, ಪ್ರಥಮ್ ಸಂಸ್ಥೆ, ಮೈಸೂರು, ಎನ್.ಜಿ.ವಿ.ಎಸ್.ಎಸ್.ಎನ್. ಚಂದಾಪುರ, ನ.ವಿ.ಕ್ರೆ.ಸೌ.ಸ.ನಿ ಶಲವಡಿ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೆರವಾದ ವ್ಯಕ್ತಿಗಳು, ಸಂಘಟನೆಗಳು, ಮತ್ತು ಒಕ್ಕೂಟಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ವಂದನೆಗಳೊಂದಿಗೆ,

-sd-
**ಶ್ರೀ ಎಚ್.ಎಫ್.ಅಕ್ಕಿ**
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,**
**ನೀಡ್ಸ್ ರಾಣೇಬೆನ್ನೂರ**

-sd-
**ಸುಶ್ರೀ ವನಮಲಾ ತುಮ್ಮಿನಕಟ್ಟಿ**
**ಅಧ್ಯಕ್ಷರು,**
**ನೀಡ್ಸ್ ರಾಣೇಬೆನ್ನೂರ**

## 7. 2022–23ನೇ ಸಾಲಿನ ಆಡಳಿತ ಮಂಡಳಿಯ ವಿವರ

| | | | | |
|---|---|---|---|---|
| 1 | **ಸುಶ್ರೀ ವನಮಲಾ ತುಮ್ಮಿನಕಟ್ಟಿ**<br>ಮಾರುತಿ ನಗರ, ಮಿನಿ ವಿಧಾನಸೌಧ ಹಿಂಭಾಗ<br>1ನೇ ಕ್ರಾಸ್ ರಾಣೇಬೇನ್ನೂರು–581115<br>ಮೋ : 9972701076 | ಬಿ.ಎ. | ಅಧ್ಯಕ್ಷರು |  |
| 2 | **ಶ್ರೀಮತಿ ಶಶಿಕಲಾ ರವಿಶಂಕರ**<br>ಕುಷಿ ನೇತಾಜಿ ವೃತ್ತ<br>ನೇತಾಜಿ ಸುಭಾಸ್ ಚಂದ್ರಬೋಸ್<br>ಬಡಾವಣೆ, ಮೈಸೂರು ರೋಡ್ ಹಿರಿಯೂರು –<br>572143 ಮೋ : 9900337228. | ಎಮ್.ಎ., | ಉಪಾಧ್ಯಕ್ಷರು |  |
| 3 | **ಶ್ರೀ ವೀರಗೊಂಡರ**<br>ಬಳಿಗಾ ಓಣಿ, ಕಮಲಾಪುರ<br>ಧಾರವಾಡ–580001<br>ಮೋ :9611482977 | ಬಿ.ಎಸ್.ಸಿ.<br>ಎಮ್.ಇ.ಡಿ. | ಉಪಾಧ್ಯಕ್ಷರು |  |
| 4 | **ಶ್ರೀ ಬಿ.ಎಚ್. ಗಣಿ**<br>ಪೋಸ್ಟ : ಬೆನಾಳ<br>ತಾ : ಬಸವನಬಾಗೆವಾಡಿ<br>ಜಿ : ಬಿಜಾಪುರ<br>ಮೋ : 8884672733 | ಬಿ.ಎ. ಬಿ.ಎಡ್. | ಕಾರ್ಯದರ್ಶಿ |  |
| 5 | **ಶ್ರೀ ಎಚ್.ಪಿ. ಕನಕೇರಿ**<br>ಪೋಸ್ಟ : ಕಿತಲಿ ತಾ : ಬದಾಮಿ ಜಿ<br>:ಬಾಗಲಕೋಟಿ<br>ಮೋ : 8970863982 | ಬಿ.ಎ. | ಖಜಾಂಚಿ |  |
| 6 | **ಶ್ರೀಮತಿ.ಮಾಧುರಿ ದೇವಧರ**<br>ದೇವಧರ ಕ್ಲಿನಿಕ್, ಸ್ಟೇಶನ್ ರೋಡ್, ಹಾವೇರಿ –<br>581110.<br>**ಮೋ : 8970863982** | ಬಿ.ಎ., ಮತ್ತು<br>ಹೋಮ್<br>ಸೈಯಿನ್ಸ್ | ನಿರ್ದೇಶಕರು |  |
| 7 | **ಶ್ರೀಮತಿ ರೀಟಾ. ಎ. ಹಂಡಾ**<br>ಮಿರ್‍ಯಾಕಲ್ಸ್/ ರಿಟಾಸ್ ಆಯುರ್ವೇದಿಕ್ ಫಾರ್ಮಸಿ<br>ಮನೆ.ನಂ. 5 1ನೇ ಕ್ರಾಸ್ ಲಿಂಗರಾಜ ನಗರ<br>ಹುಬ್ಬಳ್ಳಿ – 580028 | ಎಮ್.ಎ, | ನಿರ್ದೇಶಕರು |  |
| 8 | **ಶ್ರೀ ಸಂಜೀವ ಶಿರಹಟ್ಟಿ,**<br>ನಾಯ್ಕ, ಕೋಟೆ ರಸ್ತೆ,<br>ರಾಣೇಬೆನ್ನುರು – 581 115<br>ಹಾವೇರಿ ಜಿಲ್ಲೆ | ಎಲ್.ಎಲ್.ಬಿ | ನಿರ್ದೇಶಕರು |  |
| 9 | **ಶ್ರೀ ಎಚ್.ಎಫ್.ಅಕ್ಕಿ**<br>ಪೋಸ್ಟ : ಕುಣಿಮೇಳಿಹಳ್ಳಿ<br>ತಾ : ಸವಣೂರು<br>ಜಿ : ಹಾವೇರಿ<br>ಮೋ : 9972363984 | ಬಿ.ಎ. | ನಿರ್ದೇಶಕರು<br>/ಮುಖ್ಯ ಕಾರ್ಯ<br>ನಿರ್ವಾಹಕ<br>ಅಧಿಕಾರಿ |  |

## 8. 2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳ ಸಂಕ್ಷಿಪ್ತ ವಿವರ :

### 8.1. ಕೆಯುಐಡಿಎಫ್‌ಸಿ ಅರಿವು, ಜಾಗೃತಿ ಮತ್ತು ಸಂವಹನ ಹಾಗೂ ಫಲಿತಾಂಶ ಆಧಾರಿತ ನೆರವು ಶೌಚಾಲಯ ಕಾರ್ಯಕ್ರಮ ಹಂತ-2, ಹರಿಹರ, ಬ್ಯಾಡಗಿ ಮತ್ತು ರಾಣೇಬೆನ್ನೂರು ನಗರಗಳು.

ನೀಡ್ಸ್ ಸಂಸ್ಥೆಯು ಹಾವೇರಿ ಜಿಲ್ಲೆ ಹಾಗೂ ದಾವಣಗೇರಿ ಜಿಲ್ಲೆ ಎರಡು ಜಿಲ್ಲೆಯಿಂದ ಒಟ್ಟು ಮೂರು ತಾಲ್ಲೂಕುಗಳಾದ ರಾಣೇಬೆನ್ನೂರ, ಬ್ಯಾಡಗಿ ಹಾಗೂ ಹರಿಹರ ನಗರಗಳ ಪ್ಯಾಕೇಜ್-2 ರಲ್ಲಿ ಫಲಿತಾಂಶ ಆಧಾರಿತ ಶೌಚಾಲಯ ನೆರವು ಕಾರ್ಯಕ್ರಮವು ಕೆಯುಐಡಿಎಫ್‌ಸಿ ಮತ್ತು ಕ್ಯುಮಿಪ್ ಅಡಿಯಲ್ಲಿ ಓಬಿಎ ಶೌಚಾಲಯ ಯೋಜನೆ ಜಾರಿಗೆ ಬಂದಿದ್ದು. ಈ ಯೋಜನೆಯಲ್ಲಿ 06 ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದು. ಕೆಯುಐಡಿಎಫ್‌ಸಿ ನಿರ್ದೇಶನದಂತೆ ಶೌಚಾಲಯ ಕಟ್ಟಿಸಲು ಫಲಾನುಭವಿ ವಂತಿಗೆ 10% 1,500/- ಹಾಗೂ ಕೆಯುಐಡಿಎಫ್‌ಸಿ ವಂತಿಗೆ 70% 10,500/- ಹಾಗೂ ನಗರಸಭೆ ವಂತಿಗೆ 20% 3,000/- ಹಣ ಬಿಡುಗಡೆ ಆಗುವುದು, ಒಟ್ಟು **1,403** ವಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಅರಿವು ಜಾಗೃತಿ ಕಾರ್ಯಕ್ರಮದಡಿ ಯೋಜನೆಯ ಮುಖ್ಯ ಉದ್ದೇಶ ನೀರಿನ ಮಹತ್ವದ ಬಗ್ಗೆ ತಿಳಿಸುವುದು ಮತ್ತು ಅರಿವು ಮೂಡಿಸುವುದು, ಯೋಜನೆಯ ಪ್ರಾರಂಭದಿಂದ ಡಿಸೆಂಬರ್ 2021 ವರೆಗೆ ಮೂರು ನಗರಗಳಲ್ಲಿ ಒಟ್ಟು ನಳಗಳ ಸಂಪರ್ಕ ರಾಣೇಬೆನ್ನೂರಿನಲ್ಲಿ 21,000 ಬ್ಯಾಡಗಿ 6,037 ಹಾಗೂ ಹರಿಹರ 14,000, ಮತ್ತು ಒಳಚರಂಡಿ ಸಂಪರ್ಕ ರಾಣೇಬೆನ್ನೂರಿನಲ್ಲಿ 8,000, ಬ್ಯಾಡಗಿ 2,671 ಹಾಗೂ ಹರಿಹರ 5,619 ಹೊಂದಿದೆ. ನಗರದ ಮೂಲಭೂತ ಸೌಕರ್ಯಗಳು, ವೈಯಕ್ತಿಕ ಶೌಚಾಲಯ ಹಾಗೂ ಒಳಚರಂಡಿ ಸಂಪರ್ಕ ತಿಳುವಳಿಕಾ ಕಾರ್ಯಕ್ರಮ ಹಾಗೂ ನಗರಗಳನ್ನು ಬಯಲು ಮುಕ್ತ ಶೌಚಾಲಯವನ್ನಾಗಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.










## 8.2. ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು

ನೀಡ್ಸ್ ಸಂಸ್ಥೆ ಮತ್ತು ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಆಭಿವೃದ್ಧಿ ಸಂಸ್ಥೆ ಹಾಗೂ ಜಿಲ್ಲಾ ಪಂಚಾಯತ್ ಹಾವೇರಿ ಇವರುಗಳ ಸಹಯೋಗದೊಂದಿಗೆ ಗ್ರಾಮ ಪಂಚಾಯತಿ ಮಟ್ಟದ, ಸಂಜೀವಿನಿ ಮಹಿಳಾ ಒಕ್ಕೂಟದ ಪದಾಧಿಕಾರಿಗಳಿಗೆ ಘನತ್ಯಾಜ್ಯ ನಿರ್ವಹಣೆ ಮತ್ತು ಕಾರ್ಯಾಚರಣೆ ವಿಷಯಗಳ ಕುರಿತು 5 ದಿನಗಳ ವಸತಿಯುತ ತರಬೇತಿಯನ್ನು 185 ಗ್ರಾಮ ಪಂಚಾಯತಿಯ 545 ಪದಾಧಿಕಾರಿಗಳನ್ನೊಳಗೊಂಡ ಒಟ್ಟು 18 ತರಬೇತಿಗಳನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಗ್ರಾಮ ಮಟ್ಟದ ಘನತ್ಯಾಜ್ಯಾ ನಿರ್ವಹಾಣಾ ಘಟಕ ಸ್ಥಪನೆಗೆ ಅವಶ್ಯ ವಿರುವ ಮಾಹಿತಯನ್ನು ತರಬೇತಿಯಲ್ಲಿ ತಿಳಿಸಲಾಯಿತು ಮತ್ತು ಅಧ್ಯಯನ ಪ್ರವಾಸದಲ್ಲಿ ಘನತ್ಯಾಜ್ಯಾ ಘಟಕಗಳ ಪ್ರಾತ್ಯಕ್ಷಿಕೆ ಭೇಟಿ ಮಾಡಿಸಲಾಯಿತು.









### 8.3. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು – ಹಾವೇರಿ ಜಿಲ್ಲಾ ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮ–ಹಾವೇರಿ.

2022–23 ನೇ ಸಾಲಿನ ಜೈವಿಕ ಇಂಧನ ಭವಿಷ್ಯದ ಇಂಧನ ಭೂಗರ್ಭದ ಶಿಲಾ ಪಳವಳಿಕೆ ಗಳಿಂದ ದೊರೆಯುವ ಪೆಟ್ರೋಲ್–ಡೀಸೆಲ್ ಅತಿಯಾದ ಬಳಕೆಯಿಂದ ಅವುಗಳ ಬೆಲೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಕಾರಣ ಇವುಗಳ ಕೊರತೆ ಹೆಚ್ಚಾಗುತ್ತಿದ್ದು ಇನ್ನು ಕೆಲವೇ ವರ್ಷಗಳಲ್ಲಿ ಮುಗಿದು ಹೋಗಬಹುದೆಂದು ಸಂಶೋಧನೆಯಿಂದ ಕಂಡುಬಂದಿದೆ ಪೆಟ್ರೋಲ್, ಡೀಸೆಲ್, ಮಿತಿಮೀರಿದ ಬಳಕೆಯಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ ಭೂಗರ್ಭದ ತಾಪಮಾನ ಹೆಚ್ಚಾಗುತ್ತದೆ ಮಣ್ಣು, ಮತು ನೀರು ಕಲುಷಿತವಾಗುತ್ತಿದೆ ಜೀವರಾಶಿಗಳ ಬದುಕಿಗೆ ಸಮಸ್ಯೆಯಾಗುತ್ತದೆ. ಇವುಗಳಲ್ಲದೇ ದೇಶದ ಆರ್ಥಿಕತೆಗೆ ಭಾರಿ ಹೊರೆಯಾಗುತ್ತಿದೆ ಆದ್ದರಿಂದ ದೇಶದ ಅಭಿವೃದ್ಧಿಯಲ್ಲಿ ಕುಂಠಿತವಾಗುವುದು ಹಾಗೂ ಪ್ರತಿಯೊಬ್ಬ ಜನಸಾಮಾನ್ಯರಿಗೂ ಇದರ ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲಿ ಆದ್ದರಿಂದ ಜೈವಿಕ ಇಂಧನದ ಮೊರೆ ಹೋಗಬೇಕಾಗಿದೆ ಪ್ರತಿಯೊಬ್ಬರು ಇದರ ಬಳಕೆ ಮಾಡಬೇಕಾಗಿದೆ ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷತೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಇದು ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತ ರಾಣೆಬೆನ್ನೂರು ತಾಲೂಕಿನ ಹನುಮನಮಟ್ಟಿ ಯಲ್ಲಿ ಹದಿನೆಂಟನೆಯ ಅಕ್ಟೋಬರ್ 2012 ರಂದು ಸ್ಥಾಪನೆಗೊಂಡಿದೆ ರಾಣೆಬೆನ್ನೂರು ಮತ್ತು ಹಾವೇರಿ ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಇರುತ್ತದೆ ರಾಣೆಬೆನ್ನೂರಿನಿಂದ 12 ಕಿಲೋಮೀಟರ್ ದೂರವಿರುತ್ತದೆ. ಈ ಮಾಹಿತಿ ಕೇಂದ್ರವನ್ನು ಜಿಲ್ಲಾ ಜೈವಿಕ ಇಂಧನ ಮಹಾವಿದ್ಯಾಲಯ ಹನುಮನಮಟ್ಟಿ ಹಾಗೂ ನವೋದಯ ಶಿಕ್ಷಣ ಮತ್ತು ಪರಿಸರ ಅಭಿವೃದ್ಧಿ ಸೇವಾ ಸಂಸ್ಥೆ ರಾಣೇಬೆನ್ನೂರು ಇವರ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿದೆ, ಈ ಕೇಂದ್ರದಲ್ಲಿ ಜೈವಿಕ ಇಂಧನ ಬೆಳೆಗಳಾದ ಹೊಂಗೆ, ಬೇವು, ಹಿಪ್ಪೆ, ಸಿಮರೂಬ, ಜಟ್ರೋಪ, ಮುಂತಾದ ಬೆಳೆಯ ಕುರಿತು ಮಾಹಿತಿ ಮತ್ತು ಉತ್ಪನ್ನಗಳನ್ನು ಬಳಕೆ ಹಾಗೂ ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಲಾಗುತ್ತಿದೆ ಜೈವಿಕ ಇಂಧನ ಸಂಸ್ಕರಣೆ ಹಾಗೂ ಬಳಕೆ ಕುರಿತು ತರಬೇತಿ ನೀಡಲಾಗುತ್ತಿದೆ, ಅಲ್ಲದೆ ಜೈವಿಕ ಡೀಸೆಲ್ ಉತ್ಪಾದನೆ ನಮ್ಮ ದೇಶದ ಅಭಿವೃದ್ಧಿಗೆ ಲಾಭದಾಯಕ ಎಂದು ಸಾಬಿತುಪಡಿಸುವ ನಮ್ಮ ಕೇಂದ್ರದ ಉದ್ದೇಶವಾಗಿದೆ ಜೈವಿಕ ಇಂಧನವು ಪರಿಸರ ಸ್ನೇಹ ಉತ್ತಮ ಉದಾಹರಣೆಯಾಗಿದೆ ಹಾಗೂ ಕೃಷಿಗೆ ಪೂರಕವಾದ ಮತ್ತು ಲಾಭದಾಯಕವಾದ ಉದ್ದಿಮೆ ಎಂದು ಈ ಕೇಂದ್ರದ ಮೂಲಕ ರೈತರಿಗೆ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಉದ್ದಿಮೆಗಳಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ ಹಾಗೂ ಸ್ನಾತಕೋತ್ತರ ಮತ್ತು ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ಕೈಗೊಳ್ಳುವ ಸೂಕ್ತ ಅವಕಾಶ ಕಲ್ಪಿಸಲಾಗಿದೆ.









### 8.4. ಸುಜಲಾನ್ ಫೌಂಡೇಶನ್ – ಹಾವೇರಿ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಗದಗ, ಬೆಳಗಾವಿ, ಕೊಪ್ಪಳ ಮತ್ತು ರಾಯಚೂರು :

ಸುಜಲಾನ್ ಫೌಂಡೇಶನ್ ಹಾಗೂ ನೀಡ್ಸ್ ಸಂಸ್ಥೆಯ ಸಹಯೋಗದೊಂದಿಗೆ CSR ಕಾರ್ಯಕ್ರಮಗಳನ್ನು ಕರ್ನಾಟಕದ ಬಳ್ಳಾರಿ, ಚಿತ್ರದುರ್ಗಾ, ದಾವಣಗೆರೆ, ಗದಗ, ಕೊಪ್ಪಳ, ರಾಯಚೂರು ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಗ್ರಾಮಾಭಿವೃದ್ಧಿ ಸಂಘಗಳನ್ನು ರಚಿಸಿ (ವಿ.ಡಿ.ಸಿ) ಸಸಿ ನೆಡುವ ಕಾರ್ಯಕ್ರಮ, ಸೋಲಾರ್ ದೀಪಗಳು, ಗ್ರಾಮದ ಜನರಿಗೆ ಆರೋಗ್ಯ ತಪಾಸಣಾ ಶಿಬಿರ, ಪಶು ಆರೋಗ್ಯ ಶಿಬಿರ, ಸ್ವಚ್ಛತಾ ಅಭಿಯಾನ ಕಾರ್ಯಕ್ರಮ, ಸುತ್ತುನಿಧಿ ವಿತರಣಾ ಕಾರ್ಯಕ್ರಮ, ಅರಣ್ಯ ಬೀಜ ಬಿತ್ತನೆ, ಶಾಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿದ್ದು..







### 8.5. ವೆಸ್ಟಾಸ್ ವಿಂಡ್ ಟೆಕ್ನಾಲಾಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ – ಯಲಬುರ್ಗಾ :

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ 09 ಗ್ರಾಮಗಳಲ್ಲಿ ವೆಸ್ಟಾಸ್ ವಿಂಡ್ ಟೆಕ್ನಾಲಜಿ ಇಂಡಿಯಾ ಪ್ರೈ. ಲಿ. ಹಾಗೂ ನೀಡ್ಸ್ ಸಂಸ್ಥೆಯ ಸಹಯೋಗದೊಂದಿಗೆ ಸಿ.ಎಸ್.ಆರ್ ಕಾರ್ಯಕ್ರಮಗಳನ್ನು 2018 ರಿಂದ ಅನುಷ್ಠಾನಗೊಳಿಸುತ್ತಿದ್ದು, ಗ್ರಾಮದ ಜನರಿಗೆ ಆರೋಗ್ಯ ತಪಾಸಣಾ ಶಿಬಿರ, ಪಶು ಆರೋಗ್ಯ ಶಿಬಿರ, ಸ್ವಚ್ಛತಾ ಅಭಿಯಾನ ಕಾರ್ಯಕ್ರಮ, ಸುತ್ತುನಿಧಿ ವಿತರಣಾ ಕಾರ್ಯಕ್ರಮ, ಶಾಲಾ ಕಾರ್ಯಕ್ರಮ, ಹದಿಹರೆಯದ ಹೆಣ್ಣುಮಕ್ಕಳಿಗೆ ಅರಿವು ತರಬೇತಿ, ಹೊಲಿಗೆ ತರಬೇತಿಗಳು, ಕೆರೆ ಅಭಿವೃದ್ಧಿ ಯೋಜನೆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿದೆ. ಕೋವಿಡ್–19 ದೇಶವ್ಯಾಪ್ತಿ ಲಕ್‌ಡೌನ್ ಸಂದರ್ಭದಲ್ಲಿ ಹೊಲಿಗೆ ತರಬೇತಿ ಪಡೆದ ಫಲಾನುಭವಿಗಳಿಂದ ಆದಾಯೋತ್ಪನ್ನ ಚಟುವಟಿಕೆಯಾಗಿ ಮಾಸ್ಕ ತಯಾರಿಸಿ ಒಟ್ಟು 6,000 ಮಾಸ್ಕಗಳನ್ನು ಗ್ರಾಮಸ್ಥರಿಗೆ, ಸರ್ಕಾರಿ ಇಲಾಖಾ ಸಿಬ್ಬಂದಿಗಳಿಗೆ ವಿತರಿಸಲಾಗಿದೆ.





## 8.6. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ (WDDP) ರಾಣೇಬೆನ್ನೂರು & ಹಾವೇರಿ ಯೋಜನೆಯ ಕಿರು ಪರಿಚಯ (4D4C2K, 4D4C2J, 4D4C2M)



ಕರ್ನಾಟಕ ರಾಜ್ಯದಲ್ಲಿನ ಸಮಗ್ರ ಜಲಾನಯನ ಉಪಚಾರಕ್ಕೆ ಬಾಕಿ ಇರುವ 52.31 ಲಕ್ಷ ಹೇಕ್ಟೇರ್ ಪ್ರದೇಶವನ್ನು ಉಪಚರಿಸುವ ಉದ್ದೇಶದಿಂದ 2019–20 ನೇ ಸಾಲಿನಿಂದ 2023–24 ನೇ ಸಾಲಿನವರೆಗೆ ರಾಜ್ಯದ ಆಯ್ದ 100 ಬರಪಿಡಿತ ಮತ್ತು ಅತೀ ಹೆಚ್ಚು ಅಂತರ್ಜಲ ಕುಸಿತ ಇರುವ ತಾಲ್ಲೂಕಗಳಲ್ಲಿ, ಪ್ರತಿ ತಲ್ಲೂಕಿನಲ್ಲಿ 5,000 ದಿಂದ 10,000 ಹೇಕ್ಟೇರ್ ಪ್ರದೇಶವನ್ನು ವೈಜ್ಞಾನಿಕ ತಳಹದಿಯ ಮೇಲೆ/ಭೂ ಸಂಪನ್ಮೂಲ ಸಮೀಕ್ಷೆಯ ಆಧಾರದ ಮೇಲೆ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಉಪಚಾರದ ವಿಧಾನದಲ್ಲಿ ಮಹತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು **"ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದ ಮೂಲಕ"** ಅನುಷ್ಠಾನ ಮಾಡಲು 2019–2020 ನೇ ಸಾಲಿನಲ್ಲಿ ಅನುಮೊದನೆ ದೊರೆತಿದೆ.




**ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮವನ್ನು (Watershed Development for Drought Proofing)** ವ್ಯವಸ್ಥಿತವಾಗಿ ಮತ್ತು ಸಮರ್ಥವಾಗಿ ಅನುಷ್ಠಾನ ಮಾಡಲು ಹಾವೇರಿ ಜಿಲ್ಲೆಯಲ್ಲಿ 5 ತಾಲ್ಲೂಕಗಳನ್ನು ಆಯ್ಕೆ ಮಾಡಿಕೊಂಡಿದ್ದು, ರಾಣೇಬೆನ್ನೂರು ತಾಲ್ಲೂಕನ ಮೆಡ್ಲೇರಿ ಹಾಗೂ ರಾಣೇಬೆನ್ನೂರು ಹೊಬಳಿಗೆ ಸಂಭಂದಿಸಿದ, ಚಂದಾಪುರ ಮತ್ತು ಚಿಕ್ಕಅರಳಿಹಳ್ಳಿ ಉಪಜಲಾನಯನದ 13 ಕಿರು ಜಲಾನಯನಗಳಿಂದ ಒಟ್ಟು 6535.66 ಹೇಕ್ಟೇರ ಪ್ರದೇಶವಿದ್ದು ಉಪಚಾರಕ್ಕೆ 5284.00 ಹೆಕ್ಟೇರ್ ಪ್ರದೇಶ ಮಾತ್ರ ತಗೆದುಕೊಳ್ಳಲಾಗಿದೆ. ಉಳಿದ ಕ್ಷೇತ್ರ ನೀರಾವರಿ ನೀರಾವರಿ, ಕಾಯ್ದಿಟ್ಟ ಅರಣ್ಯ ಪ್ರದೇಶ ಮತ್ತು ಹೊನ್ನತ್ತಿ ಗ್ರಾಮದಲ್ಲಿ ಅತೀ ದೊಡ್ಡ ಕೆರೆ ಇರುತ್ತದೆ

**ಹಾವೇರಿ ತಾಲ್ಲೂಕಿನ** ಕೃಷಿ ಇಲಾಖೆಯ ಮುಖಾಂತರ ಅನುಷ್ಠಾನಗೊಳ್ಳುತ್ತಿರುವ ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ (WDDP) ಈ ಯೋಜನೆಯ ಯೋಜನಾ ಪ್ರದೇಶವು ಹಾವೇರಿ ಪೂರ್ವ ದಿಕ್ಕಿಗೆ ಸುಮಾರು 10 ಕಿ.ಮಿ ಅಂತರದಲ್ಲಿ ಇದೆ. ಜಲಾನಯನ ಪ್ರದೇಶದಲ್ಲಿ 8 ಕಿರುಜಲಾನಯನ ಪ್ರದೇಶಗಳಿದ್ದು ಒಟ್ಟು 3,400 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ, ಕೆಂಪು, ಕಪ್ಪು ಮತ್ತು ಜೇಡಿಮಣ್ಣು ಭೂಪ್ರದೇಶವನ್ನು ಹೊಂದಿರುತ್ತದೆ. ಈ ಪ್ರದೇಶ ಹೆಚ್ಚು ಮಳೆಯಾಶ್ರಿತವಾಗಿದ್ದು, ಕೆಲವು ಪ್ರದೇಶಗಳಲ್ಲಿ ಕೊಳವೆ ಬಾವಿಗಳು ಇರುತ್ತವೆ. ಜಲಾನಯನಯನದ ಸರಾಸರಿ ಇಳಿಜಾರು ಪ್ರಮಾಣ 2 ರಿಂದ 3 % ಇರುತ್ತದೆ. ಪ್ರಮುಖವಾಗಿ ಒಟ್ಟು 4 ಗ್ರಾಮ ಪಂಚಾಯ್ತಿ ವ್ಯಾಪ್ತಿಯ 8 ಗ್ರಾಮಗಳಿರುತ್ತವೆ. ಸದರಿ ಪ್ರದೇಶವು ಅತೀ ಹಿಂದುಳಿದ ಪ್ರದೇಶವಾಗಿದ್ದು ಸರಾಸರಿ ಮಳೆಯ ಪ್ರಮಾಣವು 550 ಮಿ.ಮಿ ಇರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಒಳಗೊಂಡಿರುತ್ತದೆ. ಮುಖ್ಯ ಬೆಳೆಗಳಾದ ಮುಸುಕಿನಜೋಳ, ಹತ್ತಿ,ಶೇಂಗಾ, ಹೆಸರು, ಬಿಳಿಜೋಳ, ಕಡಲೆ, ಅಲ್ಲಲ್ಲಿ ಕಬ್ಬು ಮತ್ತು ಎಲೆತೋಟಗಳು ಕಂಡುಬರುತ್ತವೆ. ಜಲಾನಯನ ಪ್ರದೇಶದ ಕನವಳ್ಳಿ ಗ್ರಾಮದಲ್ಲಿ ದೊಡ್ಡಕೆರೆ 55 (ಹೆ) ಇರುತ್ತದೆ.ಇಲ್ಲಿ ರೈತರ ಉತ್ಪಾದನೆ ಹೆಚ್ಚಳ ಮಾಡಲು, ಅಂತರ್ಜಲ ಹೆಚ್ಚಿಗೆ ಹಾಗೂ ಸಂರಕ್ಷಿತ ನೀರಾವರಿ ಮಾಡಲು ಅವಕಾಶಗಳಿವೆ.

**ಯೋಜನೆಯ ಸಂಕ್ಷಿಪ್ತ ವಿವರ :**

| | | |
|---|---|---|
| 1. | ಜಿಲ್ಲೆ ಮತ್ತು ತಾಲ್ಲುಕ | ಹಾವೇರಿ ಜಿಲ್ಲೆ – ರಾಣೇಬೆನ್ನೂರು & ಹಾವೇರಿ ತಾಲ್ಲೂಕುಗಳು |
| 2. | ಉಪಜಲಾನಯನದ ಹೆಸರು | 1. ಚಂದಾಪುರ ಮತ್ತು ಚಿಕ್ಕಅರಳಿಹಳ್ಳಿ ಉಪಜಲಾನಯನ, ರಾಣೇಬೆನ್ನೂರು ತಾಲ್ಲೂಕ<br>2. ಬಸವನಕಟ್ಟಿ ಉಪಜಲಾನಯನ – ಹಾವೇರಿ ತಾಲ್ಲೂಕ |
| 3. | ಯೋಜನೆಗೆ ಒಳಪಡುವ ಗ್ರಾಮಗಳು | **ರಾಣೇಬೆನ್ನೂರ ತಾಲೂಕಿನ 11 ಗ್ರಾಮಗಳು**<br>ಹನುಮಾಪುರ, ಹೊನ್ನತ್ತಿ, ಯಲ್ಲಾಪುರ, ನೂಕಪುರ, ಮಾದಾಪುರ, ಕೆರೆಮಲ್ಲಾಪುರ, ಹರನಗಿರಿ, ಚಿಕ್ಕುರುವತ್ತಿ, ಚಂದಾಪುರ, ಚಿಕ್ಕಹರಳಳ್ಳಿ, ಚೌಡದಾನಪುರ.<br>**ಹಾವೇರಿ ತಾಲೂಕಿನ 08 ಗ್ರಾಮಗಳು**<br>ಬೂದಗಟ್ಟಿ, ಮಾಚಾಪುರ, ಬಸವನಕಟ್ಟಿ, ಸೋಮನಕಟ್ಟಿ, ಹನುಮನಹಳ್ಳಿ, ಕನವಳ್ಳಿ., ತಿಮ್ಮೇನಹಳ್ಳಿ, ಯಲಗಚ್ಚ ಒಟ್ಟು 21 ಗ್ರಾಮಗಳು. |

**ಸ್ವ–ಸಹಾಯ ಸಂಘಗಳ ಸದಸ್ಯರಿಗೆ S1 & S2 ತರಬೇತಿ ಪ್ರಗತಿ.**

| ಕ್ರ. ಸಂ | ತಾಲೂಕ | ಗುರಿ | S1 ಫಲಾನುಭವಿಗಳು | S2 ಫಲಾನುಭವಿಗಳು |
|---|---|---|---|---|
| 1. | ರಾಣೇಬೆನ್ನೂರು | 630 | 333 | 333 |
| 2. | ಹಾವೇರಿ | 735 | 333 | 333 |
| | **ಒಟ್ಟು** | **1365** | **666** | **666** |

## ರಾಣೇಬೆನ್ನೂರ ತಾಲೂಕಿನ ಛಾಯಾಚಿತ್ರಗಳು





## ಹಾವೇರಿ ತಾಲೂಕಿನ ಛಾಯಾಚಿತ್ರಗಳು





### 8.7. ನವೋದಯ ಗ್ರಾಮ ವಿಕಾಸ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಚಂದಾಪುರ, ಶಿಗ್ಗಾಂವ್ :

ಸನ್ 2022–2023 ನೇ ಸಾಲಿನ 15 ನೇ ವರ್ಷದ ವಾರ್ಷಿಕ ವರದಿಯನ್ನು ಆರ್ಥಿಕ ತಖ್ತೆಗಳಾದ ಲಾಭ, ಹಾನಿ, ಸಾಲ ನಿತ್ಯನಿಧಿ ಠೇವಣಿ, ಪತ್ರಿಕೆಗಳ ಆಧಾರದ ಮೇಲೆ ಸಹಕಾರಿಯು ಮಾಡಿದ ಸಭೆಗಳು, ರಾಷ್ಟ್ರೀಯ ಹಬ್ಬಗಳು ಮತ್ತು ಕಾರ್ಯಕ್ರಮಗಳ ವಿವರಗಳು ಈ ಕೆಳಗಿನಂತಿದೆ.

**ಸಭೆಗಳು** : ಸನ್ 2022–2023 ನೇ ಸಾಲಿನಲ್ಲಿ 08 ಆಡಳಿತ ಮಂಡಳಿ ಸಭೆಗಳು ಮತ್ತು 2021–2022 ನೇ ಸಾಲಿನ ಒಂದು ವಾರ್ಷಿಕ ಮಹಾಸಭೆ ಹಮ್ಮಿಕೊಳ್ಳಲಾಗಿದೆ.

**ಕಾರ್ಯಕ್ಷೇತ್ರ** : ಹಾವೇರಿ ಜಿಲ್ಲೆ ಶಿಗ್ಗಾಂವ ತಾಲೂಕ (ಕ್ಯಾಲಕೊಂಡ, ಹನುಮರ ಹಳ್ಳಿ ಮತ್ತು ಹಿರೇಮಲ್ಲೂರ 03 ಗ್ರಾಮಗಳನ್ನು ಹೊರತು ಪಡಿಸಿ)

**ಸದಸ್ಯತ್ವ** : ಸನ್ 2022–2023 ನೇ ವರ್ಷದ ಆರಂಭದಲ್ಲಿ 1,939 ಸದಸ್ಯರಿದ್ದು ಹೊಸದಾಗಿ 125 ಜನರು ಸದಸ್ಯತ್ವ ಪಡೆದು, 09 ಸದಸ್ಯರು ಸದಸ್ಯತ್ವ ವಾಪಸ್ಸು ಪಡೆದಿದ್ದು ವರ್ಷಾಂತ್ಯಕ್ಕೆ ಸದಸ್ಯರ ಸಂಖ್ಯೆ 2,055 ಇರುತ್ತದೆ.

**ಷೇರು ಬಂಡವಾಳ** : ಸನ್ 2022–2023 ನೇ ವರ್ಷದ ಆರಂಭದಲ್ಲಿ ರೂ.4,22,800/– ಗಳಿದ್ದು ಸದರಿ ಸಾಲಿನಲ್ಲಿ ರೂ.16,600/– ಗಳು ಜಮಾ ಆಗಿರುತ್ತದೆ. ಸದಸ್ಯತ್ವ ವಾಪಸ್ಸು ರೂ.400/– ಗಳು ಇದ್ದು ವರ್ಷಾಂತ್ಯಕ್ಕೆ ಒಟ್ಟು ರೂ.4,39,400/– ಗಳು ಜಮಾ ಆಗಿರುತ್ತದೆ.

**ಠೇವಣಿಗಳು** : ಸಹಕಾರಿಯ ಸದಸ್ಯರಿಂದ ಸದಸ್ಯರ ಉಳಿತಾಯ ಖಾತೆ, ನಿತ್ಯ ನಿಧಿ ಠೇವಣಿ, ಮುದ್ದತಿ ಠೇವಣಿ, ಆವರ್ತಕ ಠೇವಣಿಗಳನ್ನು ಸಂಗ್ರಹಣೆ ಮಾಡಿರುವ ವಿವರ ಈ ಕೆಳಗಿನಂತಿದೆ.

| ವಿವರ | ಹಿಂದಿನ ಶುಲ್ಕ | ಜಮಾ | ಒಟ್ಟು | ಮರುಪಾವತಿ | ಬಾಕಿ |
|---|---|---|---|---|---|
| ನಿತ್ಯನಿಧಿ ಠೇವು | 45,03,069 | 1,57,85,722 | 2,02,88,791 | 1,49,73,688 | 53,15,103 |
| ಉಳಿತಾಯ ಠೇವು | 15,64,571 | 1,85,20828 | 2,00,85,399 | 1,83,57,492 | 17,27,907 |
| ಮುದ್ದತಿ ಠೇವು | 22,02,000 | 19,59,000 | 41,61,000 | 13,28,000 | 28,33,000 |
| ಆವರ್ತಕ ಠೇವು | 1,66,300 | 52,200 | 2,18,500 | 28,200 | 1,90,300 |
| ಭದ್ರತಾ ಠೇವು | --- | 9,000 | 9,000 | --- | 9,000 |
| **ಒಟ್ಟು** | **84,35,940** | **3,63,26,750** | **4,47,62,690** | **3,46,87,380** | **1,00,75,310** |

**ದುಡಿಯುವ ಬಂಡವಾಳ** : ಸನ್ 2008–09 ರಲ್ಲಿ ಕೇವಲ ರೂ. 02 ಲಕ್ಷ ಷೇರು ಬಂಡವಾಳದಿಂದ ಪ್ರಾರಂಭವಾದ ಸಹಕಾರಿ ಸನ್ 2022–23 ನೇ ಸಾಲಿನ ದುಡಿದಿರುವ ಬಂಡವಾಳ ರೂ. 84,35,940/– ಗಳು ಆಗಿರುವುದಕ್ಕೆ ಸಮಸ್ಥ ಆಡಳಿತ ಮಂಡಳಿಯಿಂದ, ಸದಸ್ಯರುಗಳಿಂದ, ಸಂಸ್ಥೆಯ ಮಾರ್ಗದರ್ಶನ ಹಾಗೂ ಇಲಾಖೆಯ ಸಹಕಾರವೇ ಕಾರಣ.

**ಸಾಲಗಳು** : ಸಹಕಾರಿಯು ತನ್ನ ಸದಸ್ಯರಿಗೆ ನಿತ್ಯನಿಧಿ ಠೇವಣಿ ಮತ್ತು ಆಸ್ತಿಗಳ ಮೇಲೆ ಸಾಲಗಳನ್ನು ನಿಡುತ್ತಿದ್ದು ಸನ್ 2022–2023 ನೇ ಸಾಲಿನಲ್ಲಿ ನೀಡಿದ ಹಾಗೂ ವಸೂಲಾದ ಮತ್ತು ವರ್ಷಾಂತ್ಯಕ್ಕೆ ಇದ್ದ ಸಾಲ ಬಾಕಿ ವಿವರ ಈ ಕೆಳಗಿನಂತಿರುತ್ತದೆ.

| ವಿವರ | ಹಿಂದಿನ ಶುಲ್ಕ | ಜಮಾ | ಒಟ್ಟು | ಮರುಪಾವತಿ | ಬಾಕಿ |
|---|---|---|---|---|---|
| ಸಾಲ | 74,94,765 | 73,91,000 | 1,48,85,765 | 58,78,505 | 90,07,260 |

**ನಿವ್ವಳ ಲಾಭ** : ಸದರಿ ವರ್ಷದಲ್ಲಿ ರೂ. 1,36,491.79/– ಗಳಿದ್ದು ಸದರಿ ವರ್ಷದಲ್ಲಿ ಶೇರುದಾರರಿಗೆ ರೂ. 51,866.88/– ಡಿವ್ಹಿಡೆಂಡ ವಿತರಿಸಲು ಲೆಕ್ಕ ಪರಿಶೋಧನಾವರದಿ ಆಧರಸಿ ನೀಡಲು ನಿರ್ಧರಿಸಿದೆ. ಇದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ. ನಿವ್ವಳ ಲಾಭವನ್ನು ಈ ಕೆಳಗಿನಂತೆ ವಿಭಾಗಣೆ ಮಾಡಲಾಗಿದೆ. ಸದರಿ ಲಾಭಾಂಶ ಕಳೆದ ಸಾಲಿಗಿಂತ ರೂ. 89,994.88/– ಗಳು ಹೆಚ್ಚಿಗೆ ಆಗಿರುವುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ.

**ಖವ್ಹಿಡೆಂಡ** : ಸಹಕಾರಿಯು ತನ್ನ ಸದಸ್ಯರಿಗೆ ಪ್ರತಿ ವರ್ಷ ನಿವ್ವಳ ಲಾಭವನ್ನು ಆಧರಸಿ ಡಿವ್ಹಿಡೆಂಡ ಘೋಷಣೆ ಮಾಡಲಾಗುತ್ತಿತ್ತು. ಆದರೆ ಸನ್ 2021–22 ನೇ ಸಾಲಿನಲ್ಲಿ ಮಹಾಮಾರಿ ಕೋರೊನಾದಿಂದ ಸಹಕಾರಿ ನಿವ್ವಳ ಲಾಭ ಕಡಿಮೆಯಾಗಿರುವ ಕಾರಣ ಡಿವ್ಹಿಡೆಂಡ್ ನೀಡಿರುವುದಿಲ್ಲ.

**ಕಾರ್ಯಕ್ರಮಗಳು :** ಸಹಕಾರಿಯಿಂದ ಪ್ರಸಕ್ತ ವರ್ಷದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯತ್ವವನ್ನು ಹೊಂದಿರುವ ಸದಸ್ಯರ ಮಕ್ಕಳಿಗೆ 10ನೇ ತರಗತಿಯಲ್ಲಿ ಅತ್ಯುತ್ತಮ ಅಂಕ ಪಡೆದ 03 ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

| ಕ್ರ.ಸಂ | ಗ್ರಾಮ | ವಿದ್ಯಾರ್ಥಿ//ವಿದ್ಯಾರ್ಥಿನಿ ಹೆಸರು |
|---|---|---|
| 01 | ಕೋಣನಕೇರಿ | ಕು. ಸಾವಿತ್ರಿ ಮಂಜುನಾಥ ದಾವಣಗೇರಿ |
| 02 | ಜಕ್ಕನಕಟ್ಟಿ | ಕು. ರುದ್ರಗೌಡ ಈಶ್ವರಗೌಡ ಪಾಟೀಲ್ |
| 03 | ಮುಳಕೇರಿ | ಕು. ಪುಷ್ಪಾ ಫಕ್ಕೀರಪ್ಪ ಶಿಗ್ಗಟ್ಟಿ |

**ಸಾಮಾಜಿಕ ಕಾರ್ಯಕ್ರಮ :** ಸಹಕಾರಿಯಿಂದ ಸನ್ 2021–22 ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಹಾವೇರಿಯ ಎಸ್.ಪಿ ಕಛೇರಿಯ ವರದಾ ಪಡೆಯಿಂದ ಮಹಿಳಾ ಕಾನೂನು, ಮಹಿಳಾ ದೌರ್ಜನ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

**ಕ್ಯಾಲೆಂಡರ್ :** ಸಹಕಾರಿಯಲ್ಲಿ ವ್ಯವಹಾರವನ್ನು ಹೊಂದಿರುವ ಗ್ರಾಹಕರಿಗೆ ಮತ್ತು ಸದಸ್ಯರಿಗೆ ಸನ್ 2022 ನೇ ಸಾಲಿನ ಸನಾತನ ಕ್ಯಾಲೆಂಡರನ್ನು ವಿತರಿಸಲಾಯಿತು.

**ಶವಸಂಸ್ಕಾರ ನಿಧಿ :** ಸಹಕಾರಿಯಿಂದ ಪ್ರಸಕ್ತ ಸಾಲಿನಲ್ಲಿ ಸದಸ್ಯರು ಮರಣ ಹೊಂದಿದಾಗ ಗೌರವ ಸೂಚಕವಾಗಿ ನೀಡುವ ಶವಸಂಸ್ಕಾರ ನಿಧಿಯನ್ನು 02 ಸದಸ್ಯರಿಗೆ ನೀಡಲಾಗಿದೆ.

- ಜನವರಿ 01 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಮಾಡಲಾಯಿತು.
- ಜನವರಿ 26 ರಂದು ಗಣರಾಜ್ಯೋತ್ಸವ ಮತ್ತು ಅಗಸ್ಟ 15 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.
- ಸಹಕಾರಿಯಿಂದ ಕರೋನಾ ಸಂಕಷ್ಟದ ಸಮಯದಲ್ಲಿ ರಾಜೀವಗ್ರಾಮದ 30 ಅಲೆಮಾರಿ ಕುಟುಂಬಗಳಿಗೆ ಆಹಾರದ ಕಿಟ್ ವಿತರಣೆ ಮಾಡಲಾಯಿತು. ಮತ್ತು ಕರೋನಾ ವಾರಿಯರ್ಸಗಳಾದ 03 ಆಶಾಕಾರ್ಯಕರ್ತರಿಗೆ ತಲಾ ರೂ.3,000/– ಗಳನ್ನು ಹಾಗೂ ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಯಿತು.





## 8.8. ನವವಿಕಾಸ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಶಲವಡಿ, ನವಲಗುಂದ :

ಸನ್ 2022–23 ನೇ ಸಾಲಿನ ವಾರ್ಷಿಕ ವರದಿಯನ್ನು ಆರ್ಥಿಕ ತಖ್ತೆಗಳಾದ ಲಾಭ, ಹಾನಿ, ಸಾಲ, ಪಿಗ್ಮಿ, ಠೇವಣಿ, ಪತ್ರಿಕೆಗಳ ಆಧಾರದ ಮೇಲೆ ತಯಾರಿಸಲಾಗಿದ್ದು ಹಾಗೂ ಸಹಕಾರಿಯಿಂದ ಮಾಡಿದ ಸಭೆಗಳು, ರಾಷ್ಟ್ರೀಯ ಹಬ್ಬಗಳು, ಮತ್ತು ಕಾರ್ಯಕ್ರಮಗಳ ವಿವರಗಳು ಈ ಕೆಳಗಿನಂತಿದೆ.

**ಸಭೆಗಳು:** ಸನ್ 2022–23ನೇ ಸಾಲಿನಲ್ಲಿ 11 ಆಡಳಿತ ಮಂಡಳಿ ಸಭೆಗಳು ಮತ್ತು 2021–22 ನೇ ಸಾಲಿನ ಒಂದು ವಾರ್ಷಿಕ ಮಹಾ ಸಭೆ ಹಮ್ಮಿಕೊಳ್ಳಲಾಗಿದೆ.

**ಕಾರ್ಯಕ್ಷೇತ್ರ :** ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ (ಅಣ್ಣಿಗೇರಿ ಹಾಗೂ ಅಮರಗೋಳ 02 ಗ್ರಾಮಗಳನ್ನು ಹೊರತು ಪಡೆಸಿ)

**ಸದಸ್ಯತ್ವ :** ಸನ್ 2022–23ನೇ ಸಾಲಿನ ಆರಂಭದಲ್ಲಿ 629 ಸದಸ್ಯರಿದ್ದು, ಹೊಸದಾಗಿ 130 ಜನ ಸದಸ್ಯರಾಗಿದ್ದು, 09 ಶೇರುದಾರರಿಗೆ ಶೇರನ್ನು ಹಿಂದಿರುಗಿಸಿರುತ್ತಾರೆ. ವರ್ಷಾಂತ್ಯಕ್ಕೆ ಸದಸ್ಯರ ಸಂಖ್ಯೆ 750 ಇರುತ್ತದೆ.

**ಶೇರು ಬಂಡವಾಳ :** ಸನ್ 2022–23ನೇ ವರ್ಷದ ಆರಂಭದಲ್ಲಿ 7,14,700/ ರೂ.ಗಳಿದ್ದು ಸನ್ 2021–22ನೇ ಸಾಲಿನಲ್ಲಿ ರೂ. 1,30,000/– ಗಳು ಜಮಾ ಆಗಿರುತ್ತದೆ. ಒಟ್ಟು ಜಮಾ ರೂ. 8,44,700/– ಇದರಲ್ಲಿ ಒಟ್ಟು ರೂ.9,000/– ಗಳನ್ನು ಹಿಂದಿರುಗಿಸಿರುವುದರಿಂದ ವರ್ಷಾಂತ್ಯಕ್ಕೆ ಒಟ್ಟು ರೂ. 8,35,700/– ಗಳು ಜಮಾ ಆಗಿರುತ್ತದೆ.

**ಠೇವಣಿಗಳು** : ಸಹಕಾರಿಯ ಸದಸ್ಯರಿಂದ ಎಸ್.ಬಿ, ಪಿಗ್ಮಿ, ಎಫ್.ಡಿ, ಠೇವಣಿಗಳನ್ನು ಸಂಗ್ರಹಣೆ ಮಾಡಿರುವ ವಿವರ ಈ ಕೆಳಗಿನಂತಿದೆ.

| ವಿವರ | ಹಿಂದಿನ ಶಿಲ್ಕು | ಜಮಾ | ಒಟ್ಟು | ಮರುಪಾವತಿ | ಬಾಕಿ |
|---|---|---|---|---|---|
| ಎಸ್,ಬಿ | 49,63,783 | 48,25,079 | 97,88,862 | 54,45,150 | 43,43,712 |
| ಎಫ್,ಡಿ | 12,11,100 | 10,18,900 | 22,29,900 | 9,12,000 | 13,17,900 |
| ಪಿಗ್ಮಿ | 25,83,338 | 1,34,12,724 | 1,59,96,062 | 1,05,56,993 | 54,39,069 |
| **ಒಟ್ಟು** | **87,58,221** | **1,92,56,703** | **2,80,14,824** | **1,69,14,143** | **1,11,00,681** |

**ಸಾಲಗಳು :** ಸಹಕಾರಿಯು ತನ್ನ ಸದಸ್ಯರಿಗೆ ಪಿಗ್ಮಿ, ಎಸ್.ಬಿ, ಠೇವಣಿಗಳ ಮೇಲೆ ಸಾಲಗಳನ್ನು ನೀಡುತ್ತಿದ್ದು ಸನ್ 2022–23 ನೇ ಸಾಲಿನಲ್ಲಿ ನೀಡಿದ ಹಾಗೂ ವಸೂಲಾದ ಮತ್ತು ವರ್ಷಾಂತ್ಯಕ್ಕೆ ಇದ್ದ ಸಾಲ ಬಾಕಿ ವಿವರ ಈ ಕೆಳಗಿನಂತಿರುತ್ತದೆ.

| ಸಾಲಗಳ ಸ್ವರೂಪ | ಆರಂಭದ ಬಾಕಿ | ಪ್ರ. ಸಾಲ ಹಂಚಿದ್ದು | ಪ್ರ. ಸಾಲ ವಸೂಲಾತಿ | ವಷಾಂತ್ಯಕ್ಕೆ ಬಾಕಿ |
|---|---|---|---|---|
| ವೈಯಕ್ತಿಕ ಸಾಲ | 18,96,206 | 27,90,487 | 13,32,511 | 33,54,182 |
| ಪಿಗ್ಮಿ ಸಾಲ | 20,15,586 | 99,61,379 | 33,33,756 | 86,43,209 |
| **ಒಟ್ಟು** | **39,11,792** | **1,27,51,866** | **46,66,267** | **1,19,97,391** |

**ನಿವ್ವಳ ಲಾಭ : ಸನ್ 2022–23** ಕಳೆದ ಸಾಲಿನಲ್ಲಿ ನಿವ್ವಳ ಲಾಭ ರೂ. 4,38,585/– ಗಳು ಇರುತ್ತದೆ, ಕಳೆದ ವರ್ಷಕ್ಕಿಂತ ಈ ವರ್ಷವು ಪ್ರಗತಿಯಲ್ಲಿದೆ.





## 9. ಪತ್ರಿಕಾ ವರದಿ :



ಪ್ರಜಾವಾಣಿ ಶುಕ್ರವಾರ ಆಗಸ್ಟ್ 13, 2021
ಹಾವೇರಿ 3
ರಾಣೆಬೆನ್ನೂರು: ಪರಿಸರ ಸ್ನೇಹಿ ಮತ್ತು ಕೃಷಿಗೆ ಪೂರಕ– ಬಸವರಾಜಪ್ಪ
ಜೈವಿಕ ಇಂಧನ ಬಳಕೆಗೆ ಸಲಹೆ




ಪ್ರಜಾವಾಣಿ ಸೋಮವಾರ ಸೆಪ್ಟೆಂಬರ್ 27, 2021
ಹಾವೇರಿ 4A
ಘನತ್ಯಾಜ್ಯ ನಿರ್ವಹಣೆ ಕಾರ್ಯಾಗಾರ
'ಯೋಜನೆಗಳ ಅನುಷ್ಠಾನಕ್ಕೆ ಧೈರ್ಯ ಅಗತ್ಯ'




ಪ್ರಜಾ ಪ್ರಗತಿ
ಫೆಬ್ರುವರಿ 15, 2021 ಸೋಮವಾರ 02
ಇಲಾಖೆಯ ಸೌಲಭ್ಯಗಳನ್ನು ಬಳಸಿಕೊಂಡು ರೈತರು ಆರ್ಥಿಕವಾಗಿ ಸಬಲರಾಗಿ: ಸ್ಫೂರ್ತಿ




ಸಂಯುಕ್ತ ಕರ್ನಾಟಕ
ಗುರುವಾರ, 7, ಜನವರಿ, 2021, ಹುಬ್ಬಳ್ಳಿ 9
ಜಲಸಿರಿ ಯೋಜನೆಯಡಿ ನಿರಂತರ ನೀರು ಸರಬರಾಜು: ಅಕ್ಕಿ

Office : I.M.A. Building, Behind Sangam Talkies, Ranebennur-581115, Karnataka, India
Regd. No. 153/92-93
Phone : 08373-260111, Mob. 9972363984, email : needsorg.rnr92@gmail.com

### 10. ಸನ್ 2023–24ರ ಮುಂಗಡ ಪತ್ರ (ಬಜೆಟ್)

| ಕ್ರ.ಸಂ | ಯೋಜನೆಯ ಹೆಸರು | ದಾನಿಗಳು | ಮೊತ್ತ (ಲಕ್ಷ ಗಳಲ್ಲಿ) | ಷರಾ |
|---|---|---|---|---|
| 1 | ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ (WDDP) | ಕೃಷಿ ಇಲಾಖೆ, ರಾಣೇಬೆನ್ನೂರು ಮತ್ತು ಹಾವೇರಿ ತಾಲ್ಲೂಕ | 1.00 | |
| 3 | ಫಲಿತಾಂಶ ಆಧಾರಿತ ಶೌಚಾಲಯ (KUIDFC-OBA) | KUIDFC- ಬೆಂಗಳೂರು | 9.00 | |
| 4 | ಘನ ತ್ಯಾಜ್ಯ ನಿರ್ವಹಣೆ | MGIRED – ಬೆಂಗಳೂರು | 8.00 | |
| 5 | ಜೈವಿಕ ಇಂಧನ ಕಾರ್ಯಕ್ರಮ | ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳ್ರರು | 3.05 | |
| 7 | ಸಮುದಾಯದ ಸುಸ್ಥಿರತೆ (Energies Deprived Community) | ಸೂಜಲಾನ್ ಫೌಂಡೇಶನ್ ಪುಣೆ. | 70.00 | |
| 8 | ಆಡಳಿತ ವೆಚ್ಚ | | 15.00 | |
| 9 | | | | |
| | **ಒಟ್ಟು ಮೊತ್ತ** | | **106.05** | |

# ಧನ್ಯವಾದಗಳು